

ಮಾಮೂಲಾಗಿ ಹೋಯಿತು. ಸುದ್ದಿ ತಾರಾನಾಥನ ಕಿವಿಗೆ ಬಿದ್ದು ಅವನು ತಿಳಿಹೇಳಿದ್ದೂ ಆಯಿತು. ಆಗೆಲ್ಲ ಒಂದೆರಡು ದಿನ ಸುಮ್ಮನಿದ್ದು ಮತ್ತೆ ಅವನದು ಯಥಾ ರಾಗ.

ಆದರೆ ವಿಧಿ ಆಟ ಬದಲಿಸಿದ್ದಿತು. ಅದೊಂದು ದಿನ ಹೆದ್ದಾರಿಯಲ್ಲಿರುವ ರೆಸಾರ್ಟಿನಲ್ಲಿ ಇಬ್ಬರೂ ಕಂಠಪೂರ್ತಿ ಕುಡಿದು ತಡರಾತ್ರಿ ಮನೆ ದಾರಿ ಹಿಡಿದಾಗ, ಅವರ ಸ್ಕೂಟರು ಆಯತಪ್ಪಿ ರಸ್ತೆ ಪಕ್ಕದ ಮರಕ್ಕೆ ಡಿಕ್ಕಿಯಾಗಿ ತಲೆಗೆ ಪೆಟ್ಟು ತಿಂದಿದ್ದ ರಾಜಶೇಖರ ಸ್ಥಳದಲ್ಲಿಯೇ ಪ್ರಾಣ ತೊರೆದಿದ್ದ. ವಾಹನ ಓಡಿಸುತ್ತಿದ್ದ ಮೋಹನನಿಗೆ ಎಡಗಾಲು ಮುರಿದಿದ್ದರೂ ಪ್ರಾಣಾಪಾಯ ದಿಂದ ಪಾರಾಗಿದ್ದ.

ಆಗೆಲ್ಲ ತಾರಾನಾಥನೆ ಮುಂದೆ ನಿಂತು ಪೊಲೀಸು, ಮಹಜರು, ಕೇಸು, ಖಟ್ಲೆ ಎಂದೆಲ್ಲ ಮುತುವರ್ಜಿಯಿಂದ ಓಡಾಡಬೇಕಾಯಿತು. ದುಃಖದ ಭಾರದಿಂದ ಕುಸಿದಿದ್ದ ಸಾವಿತ್ರಿಗೆ ಅವನದೇ ಸಾಂತ್ವನ. ಅನುಕಂಪದ ಆಧಾರದ ಮೇಲೆ ಕೆಲಸಕ್ಕೆ ಸಾವಿತ್ರಿ ಅರ್ಜಿ ಹಾಕಿದಾಗಲು ತಾರಾನಾಥ ಮೇಲಧಿಕಾರಿಗಳ ಕಚೇರಿಗೆ ಓಡಾಡಿದ್ದ. ಅಂತೂ ಸಾವಿತ್ರಿ ಎರಡನೆ ದರ್ಜೆ ಸಹಾಯಕಿಯಾಗಿ ನೇಮಕಗೊಂಡು ಗಂಡ ಕೂರುತ್ತಿದ್ದ ಕುರ್ಚಿಯಲ್ಲೆ ಕೂರುವಂತಾಗಿದ್ದಿತು. ತಾರಾನಾಥ ತೀರಾ ಸಹನೆಯಿಂದಲೇ ಸಾವಿತ್ರಿಯ ಕಲಿಯುವಿಕೆಯಲ್ಲಿ ಆಸಕ್ತಿ ವಹಿಸಿದ್ದ. ದಿನಗಳೆದಂತೆಲ್ಲ ದುಃಖದ ಮಡುವಿನಿಂದ ಹೊರಬಂದ ಸಾವಿತ್ರಿ ಕೆಲಸದಲ್ಲಿ ಚುರುಕಾದಾಗ ತಾರಾನಾಥನಿಗೆ ಖುಷಿಯಾಗದಿರಲಿಲ್ಲ.

ಯೋಚನೆಗಳ ಕುಟುಕು ವಿರಾಮ ಕೊಡದೆ ಮುಂದುವರೆದಿದ್ದರಿಂದಾಗಿಯೆ ತಾರಾನಾಥ ಕಡತಗಳತ್ತ ಗಮನ ಹರಿಸಲು ತಿಣಕಾಡುತ್ತಿದ್ದ. ಗಂಟೆ ಹನ್ನೊಂದಾದರೂ ಸಾವಿತ್ರಿಯ ಸುಳಿವಿರಲಿಲ್ಲ. ಅವಳು ಈ ಆಘಾತದಿಂದ ಚೇತರಿಸಿಕೊಂಡು ನಾಳೆಯಾದರೂ ಕಚೇರಿಗೆ ಬರಲಿ ಎಂದಿತವನ ಮನಸ್ಸು. ಬಂದವಳು ಮೇಲಧಿಕಾರಿಗೆ ತನ್ನ ಮೇಲೆ ದೂರಿತ್ತರೇ? ಎಂಬ ಪ್ರತಿ ಯೋಚನೆ ಮೆದುಳಲ್ಲಿ ಕತ್ತರಿ ಆಡಿಸಿತು. ಸಾವಿತ್ರಿ ದೊಡ್ಡ ಮನಸ್ಸು ಮಾಡಿ ತನ್ನನ್ನು ಕ್ಷಮಿಸಿದರೆ ಸಾಕು. ಅವಳಿಗೆ ಜೀವನ ಪೂರ್ತಿ ಋಣಿಯಾಗಿರುತ್ತೇನೆ ಎಂದುಕೊಂಡು ಜೋರಾಗಿ ನಿಟ್ಟುಸಿರಿಟ್ಟಿದ್ದ.

ಇಷ್ಟಕ್ಕೂ ಬೆಳಿಗ್ಗೆ ನಡೆದ ಘಟನೆಯನ್ನು ಈಗ ನೆನೆಸಿಕೊಳ್ಳಲೂ ತಾರಾನಾಥನಿಗೆ ಭಯ. ರೈಲ್ವೇ ನಿಲ್ದಾಣದಿಂದ ಬರುತ್ತಿದ್ದವನು ಸಾವಿತ್ರಿಯ ಮನೆ ಕಣ್ಣಿಗೆ ಬಿದ್ದ ಕೂಡಲೇ ಮೋಟಾರ್ ಬೈಕನ್ನು ಮನೆ ಮುಂದೆ ನಿಲ್ಲಿಸಿ ಅವಳ ಮನೆಯೊಳಕ್ಕೆ ಪ್ರವೇಶಿಸಿದ್ದಾಗಿದ್ದಿತು.

ನಡುಮನೆಯಲ್ಲಿ ಯಾರೂ ಕಾಣದಿದ್ದಾಗ ಕುತೂಹಲದಿಂದಲೇ ಸಾವಿತ್ರಿಯ ಕೋಣೆಯತ್ತ ತಿರುಗಿದ್ದ. ಸಾವಿತ್ರಿ ಆಗ ತಾನೇ ತಲೆಗೆ ಸ್ನಾನ ಮುಗಿಸಿ ತನ್ನ ನೀಳಕೂದಲನ್ನು ಬೆನ್ನ ಮೇಲೆ ಹರಡಿಕೊಂಡು ಫ್ಯಾನಿನ ಗಾಳಿಗೆ ಒಡ್ಡಿಕೊಂಡಿದ್ದಳು. 'ಓಹ್ . . ಸಾರ್ . . ನೀವಾ ಬನ್ನಿ ಬನ್ನಿ..' ಸಾವಿತ್ರಿಯ ಸ್ವಾಗತದ ನಗೆ ಹೂವಾಗಿ ಅರಳಿದ್ದಿತು.

'ಸರಿತಾ ಊರಿಗೆ ಹೋದಳು. ರೈಲು ಹತ್ತಿಸಿ ಬರ್ತಾ ಇದ್ದೀನಿ'.

'ಹ್ಯಾಗೂ ಬಂದ್ರಲ್ಲ . . . ಏನು ಕುಡೀತೀರಿ?'

'ಏನಾದರೂ ಆಗಬಹುದು' ಎಂದವನು ಮುಂದುವರೆದು 'ನಿಮ್ಮ ಅಮ್ಮ?' ಎಂದು ಪ್ರಶ್ನೆ ಮಾಡಿದ್ದ.

'ಅಮ್ಮ ಮೊಮ್ಮಗಳ ಜತೆ ತರಕಾರಿ ತರೋಕೆ ಹೊರಗೆ ಹೋಗಿದ್ದಾಳೆ..'

ತಾರಾನಾಥನ ಮೆದುಳಿನಲ್ಲಿ ಈ ದಿನ ಎಂದೂ ಮೂಡಿರದ ಹೊಸ ಭಾವನೆಯೊಂದು ಸೃಜಿಸಿ ಬಿಟ್ಟಿದ್ದಿತು. ಅವಳ ಮೋಹಕ ಸೌಂದರ್ಯ ಅವನಿಗೆ ಮೋಡಿ ಮಾಡಿತು. ಅವನ ನೀಳ ತೋಳುಗಳಲ್ಲಿ ಹೊಸ ಹುರುಪು ಸೇರಿಕೊಂಡಿದ್ದಿತು. ಸಾವಿತ್ರಿಯ ಕೈಯನ್ನು ಹಿಡಿದು ತನ್ನತ್ತ ಸೆಳೆದು ಕೊಂಡವನೆ ಹಿತವಾಗಿ ಬಳಸಿಕೊಂಡು ಅವಳ ತುಟಿಗಳಿಗೆ ತುಟಿ ಸೇರಿಸಿದ್ದ. ಅವಳು ಕೊಸರಾಡಿದರೂ ಅವನ ಬಿಗಿ ಹಿಡಿತ ಸಡಿಲವಾಗಿರಲಿಲ್ಲ. ಹೇಗೋ ಬಿಡಿಸಿಕೊಂಡ ಸಾವಿತ್ರಿ ಅಲ್ಲಿಂದ ನಡುಮನೆಗೆ ಬಂದಿದ್ದಳು. ಅವಳನ್ನು ಹಿಂಬಾಲಿಸಿ ಬಂದಿದ್ದ ತಾರಾನಾಥ..

'ಕ್ಷಮಿಸಿ ಬಿಡು ಸಾವಿತ್ರಿ. . . ಇದು ನನಗೂ ಅನಿರೀಕ್ಷಿತ . . ಈ ಮುಂಚೆ ಎಂದೂ ಇಂಥ ಭಾವನೆ ನನ್ನ ಮನಸ್ಸಿನಲ್ಲಿ ಮೂಡಿರಲಿಲ್ಲ. ಈ ಊರಿಂದ ವರ್ಗವಾಗಿ ಹೋಗ್ತಿದ್ದೀನಲ್ಲ. . ಇಷ್ಟು ದಿನಗಳ ನಮ್ಮಿಬ್ಬರ ಸ್ನೇಹ ಮಧುರ ನೆನಪಾಗಿ ಉಳಿಯಲಿ ಅಂತಲೆ ಅವಸರ ಪಟ್ಟುಬಿಟ್ಟೆ . . . ದಯಮಾಡಿ ನನ್ನ ಬಗ್ಗೆ ಕ್ಷಮೆ ಇರಲಿ.' ಅವನು ಆತ್ಮ ನಿವೇದನೆಗೆ ತೊಡಗಿದ್ದ. ಆದರೆ ಸಾವಿತ್ರಿಯ ಕಣ್ಣುಗಳಲ್ಲಿ ಕಂಬನಿ ಕೋಡಿ ಬಿದ್ದಿತ್ತು. ಅವಳು ಪ್ರತಿಕ್ರಿಯಿಸದೆ ಮೂಕಳಾಗಿ ನಿಂತು ಬಿಟ್ಟಾಗ 'ಬರ್ತೀನಿ' ಎಂದು ತಾರಾನಾಥ ಹೊರನಡೆದಿದ್ದ.

ಅರೇ ಇದೇನು ಸಾವಿತ್ರಿ ಕುರ್ಚಿ ಖಾಲಿ ಇದೆಯಲ್ಲ ಎಂದುಕೊಂಡು ಮೋಹನ ಒಳ ಬಂದವನೆ ಅವಳ ಕುರ್ಚಿಯಲ್ಲೆ ಆಸೀನನಾದಾಗ ತಾರಾನಾಥ ಯೋಚನೆಗಳ ಸಿಕ್ಕಿನಿಂದ ಹೊರಬಂದಿದ್ದ.

'ಎಲ್ಲಿ ಸಾರ್ ನಿಮ್ಮ ಅಸಿಸ್ಟೆಂಟ್?' ತನ್ನ ಕುತೂಹಲವನ್ನು ಹೊರಹಾಕಿದ ಮೋಹನ.

'ಗೊತ್ತಿಲ್ಲ ಮೋಹನ್, ನನಗೂ ಫೋನ್ ಮಾಡಿಲ್ಲ' ತಾರಾನಾಥನ ಪ್ರತಿಕ್ರಿಯೆ.

'ರಜಾ ಹಾಕಿದ್ದಾಳೇನು?'

'ನನಗೇನೂ ಗೊತ್ತಿಲ್ಲ. ಸದ್ಯ ಅವಳ ಮಾತು ಎತ್ತದಿದ್ದರೆ ಸಾಕು ಎನ್ನಿಸಿತ್ತು ತಾರಾನಾಥನಿಗೆ. ಯಾಕೋ ನೀನು ಮೂಡಲ್ಲಿ ಇದ್ದ ಹಾಗಿಲ್ಲ. ನಡೀ ಕಾಫೀಯಾದರೂ ಕುಡಿದು ಬರೋಣ'